Affairs about Closure of Vignan Industries at Tarlkere

ಶ್ರೀ ಎಸ್. ಬಂಗಾರಪ.—ಅಧ್ಯಕ್ಷರೇ, ಮತ್ತೊಂದು ವಿಷಯದ ಬಗ್ಗೆ ನೋಟೀಸ್ ಕಳುಹಿಸಿ ಕೊಟ್ಟಿದೆ. ತರೀಕೆರೆಯಲ್ಲಿ ವಿಜ್ಞಾನ ಇಂಡಸ್ಟ್ರೀಸ್ ಕ್ಲೋಸ್ ಆಗಿ ಮೂರು ನಾಲ್ಕು ತಿಂಗಳು ಆಗಿದೆ. ಅಲ್ಲಿ ಸುಮಾರು ೪ ಸಾವಿರ ಜನರು ಕೆಲಸ ಮಾಡುತ್ತಿದ್ದರು.

ಅಧ್ಯಕ್ಷರು.—ಮಾನ್ಯ ಮಲ್ಲಪ್ಪನವರು, ಮತ್ತು ಮಾನ್ಯ ಶಿವಣ್ಣನವರು ಎರಡು ಕಾಲಿಂಗ್ ಅಟೆನ್‌ಷನ್ ನೋಟೀಸ್‌ಗಳನ್ನು ಕಳುಹಿಸಿದ್ದಾರೆ, ಅದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರೆ, ಇನ್ನೊಂದು ವಿಷಯ. ಅದು ಈ ವಿಜಯನಗರ ಮಹೋತ್ಸವ ಏನು ನಡೆದಿದೆ ಅದರ ಬಗ್ಗೆ ಕಳುಹಿಸಿದ್ದೆ,

ಅಧ್ಯಕ್ಷರು.—ನಾಳೆ ಸ್ಟೇಟ್‌ಮೆಂಟ್ ಮಾಡುತ್ತಾರೆ.

Overtime work turnedout by Staff of the Legislature Secretariat

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅಧ್ಯಕ್ಷರೇ, ನಾನು ಒಂದು ನೋಟೀಸ್ ಕಳುಹಿಸಿಕೊಟ್ಟಿದೆ, ಅದು ಲೆಜಿಸ್ಲೇಚರ್ ಸೆಕ್ರೆಟೇರಿಯೆಟ್‌ನಲ್ಲಿ ಇರತಕ್ಕ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗಕ್ಕೆ ಸೇರಿದ್ದು. ಪದೇ ಪದೇ ತಮ್ಮ ಮಂಖಾಂತರ ಸರ್ಕಾರವನ್ನು ಒತ್ತಾಯ ಮಾಡಿದ್ದೇವೆ. ಇಲ್ಲಿಯ ಅಧಿಕಾರಿಗಳು ಹೊತ್ತು ಗೊತ್ತು ಏನು ಇಲ್ಲದೆ ಮಿತಿ ಮೀರಿ ಕೆಲಸ ಮಾಡಬೇಕಾಗಿರುತ್ತದೆ. ಈಗ ನಮ್ಮ ಕಷ್ಟ ಯಾರಿಗೆ ಹೇಳ ಬೇಕು ಎನ್ನುವುದು ಗೊತ್ತಾಗುತ್ತಾ ಇಲ್ಲ ಈಗ ನಾವು ಇಲ್ಲಿರತಕ್ಕ ಖಾಲಿ ಬೆಂಚುಗಳಿಗೆ ಹೇಳಬೇಕಾಗಿದೆ. ಇದರ ಬಗ್ಗೆ ಪದೇ ಪದೇ ತಮ್ಮ ಮುಖಾಂತರ ಒತ್ತಾಯ ಮಾಡಿದ್ದೇವೆ. ಈಗ ಮಾನ್ಯ ಮುಖ್ಯ ಮಂತ್ರಿ ಗಳು ಎಲ್ಲಿ ಹೋಗಿದ್ದಾರೆ ದಯಮಾಡಿ ಕರೆಸಬೇಕು. ಇಲ್ಲದೇ ಹೋದರೆ ನಮ್ಮ ಕಷ್ಟ ಯಾರಿಗೆ ಹೇಳಬೇಕು?

ಶ್ರೀ ಡಿ. ಕೆ. ನಾಯ್ಕರ್.—ಮಂತ್ರಿಗಳು ಇಲ್ಲೇ ಇದ್ದಾರೆ ತಮ ದು ಏನು ಹೇಳಬೇಕು ಅದನ್ನು ಹೇಳಿ.

ಅಧ್ಯಕ್ಷರು.—ಈಗ ಎರಡು ಹೌಸ್ ನಡೆಯುತ್ತಾ ಇರುವುದರಿಂದ ಅವರು ಮೇಲ್ಮನೆಗೆ ಹೋಗಿರ ಬಹುದು.

ಶ್ರೀ ಬಿ. ಪುಟ್ಟಸಾಮಯ್ಯ.—ಇಲ್ಲಿಯ ಸಭಾನಾಯಕರು ಮಾನ್ಯ ದೇವರಾಜ್ ಅರಸು ಅವರು, ಮೇಲ್ಮನೆಯ ಸಭಾನಾಯಕರು ಮಾನ್ಯ ಹುಚ್ಚಮಾಸ್ತಿಗೌಡರು ಆದ್ದರಿಂದ ಮಾನ್ಯ ದೇವರಾಜ್ ಅರಸು ಅವರೂ ಇಲ್ಲೇ ಇರಬೇಕು. ಅವರಿಗೆ ಪದೇ ಪದೇ ತೆಂಗಿನಕಾಯಿ ಒಡೆದು ಮಂಗಳಾರತಿ ಮಾಡಬೇಕೋ ಏನೋ ಗೊತಿ ಲ್ಲ.

ಅಧ್ಯಕ್ಷರು.—ವಿಪರೀತ ಮುಂದೆ ಹೋದರೆ ಚೆನ್ನಾಗಿ ಇರುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈಗ ಅಧ್ಯಕ್ಷ ಸ್ಥಾನದಲ್ಲಿ ಯಾರು ಇರುತ್ತಾರೆ ಅವರೇ ನಮಗೆ ದೇವರು ಆದ್ದರಿಂದ ತಮ್ಮಲ್ಲಿ ಮಂರೆ ಹೋಗುತ್ತೇವೆ. ತಾವು ನಮ್ಮ ಸಹಾಯಕ್ಕೆ ಬರದೇ ಹೋದರೆ ಕಷ್ಟವಾಗುತ್ತದೆ.

ಅಧ್ಯಕ್ಷರು —ಇದುವರೆಗೂ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲೇ ಇದ್ದರು, ಈಗ ತಾನೇ ಮೇಲ್ಮನೆಗೆ ಹೋಗಿರಬಹುದು. ನಾಳೆ ದಿವಸ ತಾವು ಇದನ್ನು ಮಾತನಾಡಬಹುದು.

Letting out Extra Water from Thippagondanahalli to Arkavathi River

ಶ್ರೀ ಬಿ. ಪುಟ್ಟಸಾಮಯ್ಯ.—ಅಧ್ಯಕ್ಷರೇ, ಈಗ ನಮ್ಮ ಪ್ರದೇಶಗಳಲ್ಲಿ ಸೆಪ್ಟೆಂಬರ್ ತಿಂಗಳ ಅಖೈರಿ ನಿಂದ ಈಚೆಗೆ ಮಳೆ ಇಲ್ಲ ಅಂದರೆ ಮಳೆ ಬಂದು ಇಲ್ಲಿಗೆ ಏಳು ತಿಂಗಳಾಗುತ್ತಾ ಬಂದಿದೆ. ಇನ್ನು ಮುಂದೆ ನಮ್ಮ ಕಡೆಗಳಲ್ಲಿ ಎಷ್ಟು ಆಳ ತೋಡಿದರೂ ಬಾವಿಗಳಲ್ಲಿ ನೀರೂ ಬರುವುದಿಲ್ಲ ಈಗ ಅಲ್ಲಿ ಇರತಕ್ಕ ಬಾವಿ ಗಳಲ್ಲಿ ನೀರೂ ಬತ್ತಿ ಹೋಗುತ್ತಾ ಬಂದಿದೆ. ಈಗ ಬೆಂಗಳೂರಿಗೆ ತಿಪ್ಪಗೊಂಡನಹಳ್ಳಿಯಿಂದಲೂ ನೀರೂ ಬರುತ್ತದೆ, ಅಲ್ಲದೇ ಕಾವೇರಿ ನೀರು ಬರುತ್ತದೆ. ಆದುದರಿಂದ ಈ ತಿಪ್ಪಗೊಂಡನಹಳ್ಳಿ ನೀರನ್ನು